| ತರಗತಿ : 6 | | ವಿಷಯ : ಸಮಾಜ ವಿಜ್ಞಾನ | | ಸೇತು "ಬಂಧ" |
|---|---|---|---|---|
| ಸಂಖ್ಯೆ | ಅಪೇಕ್ಷಿತಕಲಿಕಾಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
| 01 | 4 (4ನೇ ತರಗತಿ) ಮಾನವ ಮತ್ತು ಪ್ರಾಣಿಗಳ ನಡುವಿನ ಸಂಬಂಧ ಮತ್ತು ಪರಸ್ಪರ ಅವಲಂಬನೆಯನ್ನು ಗುರುತಿಸುವರು.<br><br>ಜೇನು ಸಂಗ್ರಹಣೆಯ ವಿಧಾನವನ್ನು ತಿಳಿಯುವರು ಮತ್ತು ಅದರ ಉಪಯೋಗವನ್ನು ಪಟ್ಟಿ ಮಾಡುವರು. | • ಪ್ರಾಣಿಗಳಿಗೂ ಮತ್ತು ಮಾನವರಿಗೂ ಇರುವ ವ್ಯತ್ಯಾಸ ಮತ್ತು ಹೋಲಿಕೆಗಳು<br><br>• ಪ್ರಾಣಿಗಳ ಮೇಲೆ ಮಾನವನ ಅವಲಂಬನೆ<br><br>• ಜೇನು ಸಂಗ್ರಹಣೆ ಮತ್ತು ಅದರ ಉಪಯೋಗಗಳು. | 1.1) "ನಾನು ನೀನಾದಾಗ"<br><br>1.2)ಗುಂಪು ಚಟುವಟಿಕೆ<br><br>1.3)ಚಿತ್ರ ನೋಡಿ ಮಾತನಾಡು<br><br>1.4)ಕ್ಷೇತ್ರ ಭೇಟಿ/ಹೊರಸಂಚಾರ | 1.1)ವಿದ್ಯಾರ್ಥಿಗಳು ತಾವೇ ಒಂದೊಂದು ಪ್ರಾಣಿ/ಪಕ್ಷಿ ಹೆಸರನ್ನು ಆಯ್ಕೆ ಮಾಡಿಕೊಂಡು ತಮಗನಿಸಿದಂತೆ ಪ್ರಾಣಿ/ಪಕ್ಷಿಗಳ ಬಗ್ಗೆ ಮುಕ್ತವಾಗಿ ಮಾತನಾಡಲಿ.<br>1.2)ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ತಂಡಗಳನ್ನು ರಚಿಸಿ, ವಿಷಯ ಹಂಚಿಕೆ ಮಾಡಿ(ಒಂದು ಗುಂಪು ಪ್ರಾಣಿ ಮತ್ತು ಮಾನವನಿಗೂ ಇರುವ ಹೋಲಿಕೆಗಳನ್ನು, ಇನ್ನೊಂದು ಗುಂಪು ಪ್ರಾಣಿಗಳಿಗೂ ಮತ್ತು ಮಾನವನಿಗೂ ಇರುವ ವ್ಯತ್ಯಾಸಗಳನ್ನು ಪಟ್ಟಿ ಮಾಡುವಂತೆ ಸೂಚಿಸಿ)<br>1.3) ಕೆಲವೊಂದು ಪ್ರಾಣಿಗಳ ಚಿತ್ರಗಳನ್ನು ತೋರಿಸಿ, ಅವುಗಳಿಂದ ನಮಗಾಗುವ ಉಪಯೋಗಗಳನ್ನು ಹೇಳುವಂತೆ ಸೂಚಿಸಿ. ಮಾನವ ಮತ್ತು ಪ್ರಾಣಿಗಳ ನಡುವೆ ಪರಸ್ಪರ ಅವಲಂಬನೆ ಇರುವುದನ್ನು ಅರ್ಥೈಸಿ.<br>1.4)ಸ್ಥಳೀಯವಾಗಿ ಜೇನು ಸಾಕಣೆಯಲ್ಲಿ ತೊಡಗಿದವರು ಲಭ್ಯವಿದ್ದಲ್ಲಿ /ಪರಿಸರದಲ್ಲಿ ಜೇನು ಗೂಡು ನೋಡಲು ಅವಕಾಶಗಳಿದ್ದಲ್ಲಿ ಭೇಟಿ ನೀಡಿ. |

<table>
<tr>
<td></td>
<td></td>
<td></td>
<td>1.5)<br>ವಿಡಿಯೋ<br>ಕ್ಲಿಪ್ /<br>ಚಾರ್ಟ್<br>ಪ್ರದರ್ಶನ</td>
<td>1.5) ಕ್ಷೇತ್ರ ಭೇಟಿಗೆ ಅವಕಾಶವಿಲ್ಲದಿದ್ದಲ್ಲಿ ವಿಡಿಯೋ / ಚಿತ್ರಗಳ ಮೂಲಕ ಜೇನು ಸಂಗ್ರಹಣೆ ಮತ್ತು ಅದರ ಉಪಯೋಗಗಳ ಕುರಿತು ಮಾಹಿತಿ ನೀಡಿ.<br>❖ ಜೇನುಗೂಡಿನ ಉತ್ಪನ್ನಗಳಿಂದ ಸಿಗುವ / ತಯಾರಿಸಬಹುದಾದ ವಸ್ತುಗಳ ಚಿತ್ರಗಳನ್ನು ಪ್ರದರ್ಶಿಸಿ.(ಉದಾ:ಜೇನು ತುಪ್ಪ,ಮೇಣದ ಬತ್ತಿ,ಬಣ್ಣ,ಇಂಕ್ ,ಪೌಡರ್,ಮುಲಾಮು ಇತ್ಯಾದಿ)<br>❖ https://youtu.be/rDkOgR3htsk<br>❖ https://youtu.be/LVj3o259ZCU<br>❖ https://youtu.be/9rrv2S8ciGQ<br>ಒಟ್ಟು ಅವಧಿ -02</td>
</tr>
<tr>
<td>02</td>
<td>3 ( 4ನೇ ತರಗತಿ )<br>ವಿವಿಧ ರೀತಿಯ ಕುಟುಂಬಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸರಳ ವಂಶವೃಕ್ಷದ ಮೂಲಕ ಹೋಲಿಸುವರು.</td>
<td>• ವಂಶವೃಕ್ಷರಚನೆ<br>• ಕುಟುಂಬದ ವಿಧಗಳಾದ- ವಿಭಕ್ತಮತ್ತುಅವಿಭಕ್ತ ಕುಟುಂಬಗಳ ಲಕ್ಷಣಗಳು<br>• ಕುಟುಂಬದ ಮಹತ್ವ</td>
<td>2.1)<br>ಪ್ರಶ್ನಾವಳಿ –<br>ಕೋಷ್ಟಕ</td>
<td>2.1)ಪ್ರಶ್ನಾವಳಿ ರಚಿಸಿಕೊಂಡು ಮಗುವಿಗೆ ತನ್ನ ಕುಟುಂಬದ ಪರಿಚಯ ಮಾಡಿಕೊಡಲು ತಿಳಿಸಿ.<br>➢ ನಿನ್ನ ಕುಟುಂಬದಲ್ಲಿ ಎಷ್ಟು ಜನರಿದ್ದಾರೆ?<br>➢ ನಿನ್ನ ಕುಟುಂಬದ ಸದಸ್ಯರು ಮತ್ತು ನಿನ್ನೊಂದಿಗೆ ಅವರ ಸಂಬಂಧವನ್ನು ತಿಳಿಸು.
<table>
<tr><th>ಸಂಖ್ಯೆ</th><th>ಭೇಟಿ ನೀಡಿದ ಮನೆಯ ಮುಖ್ಯಸ್ಥರ ಹೆಸರು</th><th>ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ</th><th>ಮುಖ್ಯಸ್ಥರೊಂದಿಗೆ ಸದಸ್ಯರು ಹೊಂದಿರುವ ಸಂಬಂಧ</th></tr>
<tr><td></td><td></td><td></td><td></td></tr>
</table>
</td>
</tr>
</table>

| | | | | |
|---|---|---|---|---|
| | | | 2.2)ವಂಶವೃಕ್ಷ ರಚನೆ | 2.2)ಪ್ರತಿ ವಿಧ್ಯಾರ್ಥಿಗೂ ತನ್ನ ಕುಟುಂಬದ ವಂಶವೃಕ್ಷ ಬರೆಯಲು ಸೂಚಿಸಿ.<br>**(ಸೂಚನೆ:** ವಂಶವೃಕ್ಷದಲ್ಲಿ ಬಳಸುವ ಸಂಕೇತಗಳನ್ನು ಶಿಕ್ಷಕರು ಪರಿಚಯಿಸಿರಬೇಕು. ಪರಿಸರ ಅಧ್ಯಯನ 4ನೇ ತರಗತಿಯ 16ನೇ ಪಾಠ, 5ನೇ ತರಗತಿಯ 2ನೇ ಪಾಠದಲ್ಲಿ ಈ ಬಗ್ಗೆಪರಿಚಯಿಸಲಾಗಿದೆ)<br> |
| | | | 2.3)ನಾಟಕಾಭಿನಯ | 2.3)ತರಗತಿಯ ಮಕ್ಕಳನ್ನೇ ಬಳಸಿಕೊಂಡು ನಾಟಕಾಭಿನಯ ಮಾಡಿಸುವ ಮೂಲಕ ವಿಭಕ್ತ ಮತ್ತು ಅವಿಭಕ್ತ ಕಟುಂಬಗಳ ಪರಿಕಲ್ಪನೆ ಮೂಡಿಸಿ ಮತ್ತು ಅವುಗಳ ಲಕ್ಷಣಗಳನ್ನು ಅರ್ಥೈಸಿ. |
| | | | 2.4)ಸಮೀಕ್ಷೆ | 2.4)ವಿಧ್ಯಾರ್ಥಿಗಳಿಗೆ ತಮ್ಮ ನೆರೆಹೊರೆಯ ಐದು ಮನೆಗಳಿಗೆ ಭೇಟಿ ನೀಡಿ, ಈ ಕೆಳಗಿನ ನಮೂನೆಯಲ್ಲಿರುವಂತೆ ಮಾಹಿತಿ ಸಂಗ್ರಹಿಸಿಕೊಂಡು ಬರಲು ಸೂಚಿಸಿ. |
| | | | 2.5)ಚರ್ಚೆ | 2.5)ಪ್ರಸ್ತುತ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಲು ಕಾರಣಗಳು ಏನೆಂಬುದನ್ನು ಚರ್ಚೆಯ ಮೂಲಕ ಅರ್ಥೈಸಿ. |

| | | | | |
|---|---|---|---|---|
| | | | 2.6) ಟ್ರಜರ್ ಹಂಟ್ | 2.6)ಕುಟುಂಬಗಳಲ್ಲಿ ನಾವು ಕಲಿಯಬಹುದಾದ ಗುಣಗಳನ್ನು (ಉದಾ:ಪ್ರೀತಿ, ಸಹಕಾರ, ಸಹಬಾಳ್ವೆ, ಹೊಂದಾಣಿಕೆ ಇತ್ಯಾದಿ) ಚೀಟಿಗಳಲ್ಲಿ ಬರೆದು ತರಗತಿ ಕೊಠಡಿ/ಶಾಲಾ ಪರಿಸರದಲ್ಲಿ ಅಡಗಿಸಿಡಿ. ಮಕ್ಕಳಿಗೆ ಅವುಗಳನ್ನು ಹುಡುಕಿ ತರುವ ಟಾಸ್ಕ್ ನೀಡಿ. ನಂತರ ಈ ಎಲ್ಲ ಅಂಶಗಳನ್ನು ಕುರಿತು ಚರ್ಚಿಸಿ ಅರ್ಥೈಸಿ.<br>ಒಟ್ಟು ಅವಧಿಗಳು -02 |
| 03 | 5 (4ನೇ ತರಗತಿ )<br>ವಿವಿಧ ಕುಶಲಕರ್ಮಿಗಳು ತಯಾರಿಸುವ ಆಟಿಕೆ ಮತ್ತು ವಸ್ತುಗಳನ್ನು ಹೆಸರಿಸುವರು.<br><br>ಬಾಲಕಾರ್ಮಿಕರು ಎದುರಿಸುವ ತೊಂದರೆಗಳನ್ನು ಗುರುತಿಸುವುದು. | • ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿನ ವಿವಿಧ ಕಸುಬುದಾರರನ್ನು ಗುರುತಿಸುವುದು.<br><br>• ದುಡಿಯುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದು. | 3.1)ಕ್ಷೇತ್ರ ಭೇಟಿ<br><br>3.2)ಚಿತ್ರ ಪಟ/ | 3.1)ಲಭ್ಯವಿರುವ ಸ್ಥಳೀಯ ಕುಶಲ ಕರ್ಮಿಗಳನ್ನು ಭೇಟಿ ಮಾಡಿ/ಸಂದರ್ಶಿಸಿ.<br><br><br><br><br>3.2)ಕ್ಷೇತ್ರ ಭೇಟಿಗೆ ಅವಕಾಶವಿಲ್ಲದಿದ್ದಲ್ಲಿ |

| | | | | |
|---|---|---|---|---|
| | | | ವಿಡಿಯೋ/ ಕಿರುಚಿತ್ರ ಪ್ರದರ್ಶನ<br><br>3.3) ಕರ್ನಾಟಕದ ವಿವಿಧ ಜಿಲ್ಲೆಗಳ ಕುಶಲ ಕಲೆಗಳ ಪರಿಚಯ<br>3.4) ಮಣ್ಣಿನ ಮಾದರಿ/ ಕರಕುಶಲ ವಸ್ತು ತಯಾರಿಕೆ.<br>3.5)ಮಕ್ಕಳ ಸಹಾಯವಾಣಿ ಸಂಖ್ಯೆ 1098- ಕಿರು ನಾಟಕ<br><br>3.6) ಕಿರುಚಿತ್ರ | ವಿಡಿಯೋ ಕ್ಲಿಪಿಂಗ್ /ಚಿತ್ರ ಪಟಗಳ ಮೂಲಕ ವಿವಿಧ ಕುಶಲಕರ್ಮಿಗಳು,ಆಟಿಕೆ /ವಸ್ತು ತಯಾರಿಕೆಯ ಕುರಿತು ಪರಿಚಯಿಸಿ. (ಉದಾ: ಚನ್ನಪಟ್ಟಣದ ಗೊಂಬೆ ತಯಾರಿಕೆ, ಕಿನ್ನಾಳ ಗೊಂಬೆಗಳು ಇತ್ಯಾದಿ)<br>https://youtu.be/RAE4ayqkEm0<br>https://youtu.be/dLvwtdZqxkw<br>3.3) ಕರ್ನಾಟಕದಲ್ಲಿ ಕಂಡು ಬರುವ ಜಿಲ್ಲೆಗಳ ಹೆಸರುಗಳನ್ನು ಬರೆಯಿಸಿ. ಅಲ್ಲಿನ ವಿಶೇಷ ಕರಕುಶಲ ಕಲೆಗಳನ್ನು ಪಟ್ಟಿ ಮಾಡಿಸಿ, ಅವುಗಳನ್ನು ತರಗತಿಯಲ್ಲಿ ಪ್ರದರ್ಶಿಸಿ.<br><br>3.4)ಮಣ್ಣಿನಿಂದ ಆಟಿಕೆ/ ಕರಕುಶಲ ವಸ್ತುಗಳನ್ನು ತಯಾರಿಸಿಕೊಂಡು ಬರಲು ಮಕ್ಕಳಿಗೆ ಹೇಳಿರಿ. ಶಾಲೆಯಲ್ಲಿ ಅವುಗಳನ್ನು ಪ್ರದರ್ಶನ ಮಾಡಿ.ಮಕ್ಕಳುಅವುಗಳಬಗ್ಗೆ ಮಾತಾಡಲಿ.<br>3.5)ಬಾಲ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಾದ ನಾಟಕವನ್ನು ಮಕ್ಕಳಿಂದ ಮಾಡಿಸಿ. ಮಕ್ಕಳ ಸಹಾಯವಾಣಿ “1098” ನ್ನು ನಾಟಕದಲ್ಲಿ ಬರುವಂತೆ ಬಳಸಿಕೊಳ್ಳಿ.<br>3.6 ) ಬಾಲ ಕಾರ್ಮಿಕರ ಕುರಿತಾದ ಕಿರುಚಿತ್ರಗಳನ್ನು ಪ್ರದರ್ಶಿಸಿ.<br>https://youtu.be/zzdHy_CW8oY |

| | | | | |
|---|---|---|---|---|
| | | | ಪ್ರದರ್ಶನ<br><br>3.7) ಬೀದಿ ನಾಟಕ<br><br>3.8) ಸಂದರ್ಶನ | https://youtu.be/RtoD5B1dflc<br>3.7)ಮಕ್ಕಳಿಂದ ಬಾಲ ಕಾರ್ಮಿಕ ಪದ್ಧತಿಯ ಕುರಿತಾದ ಬೀದಿ ನಾಟಕ ಮಾಡಿಸುವ ಮೂಲಕ ಸಮುದಾಯದಲ್ಲಿ ಜಾಗೃತಿ ಮೂಡಿಸಿ.<br>3.8) ಸಾಧ್ಯವಾದಲ್ಲಿ, ಈ ಹಿಂದೆ ಬಾಲ ಕಾರ್ಮಿಕರಾಗಿ ದುಡಿದಂತಹ ಹಿರಿಯರು ಸ್ಥಳೀಯವಾಗಿ ಲಭ್ಯವಿದ್ದಲ್ಲಿ ಅವರನ್ನು ಶಾಲೆಗೆ ಕರೆಯಿಸಿ ಸಂದರ್ಶನ ಏರ್ಪಡಿಸಿ.<br>ಒಟ್ಟು ಅವಧಿಗಳು – 02 |
| 04 | 9 (4ನೇ ತರಗತಿ )<br>ಸ್ಥಳೀಯ ಸಂಸ್ಕೃತಿ ಗಳಾದ ಹಬ್ಬ ಜಾತ್ರೆ ಇತ್ಯಾದಿ ಆಚರಣೆಗಳನ್ನು ವಿವರಿಸುವರು.<br><br>ನಮ್ಮರಾಜ್ಯದ ಜನರ ವಿಭಿನ್ನ ಸಂಸ್ಕೃತಿ ಮತ್ತು | • ಹಬ್ಬ ಮತ್ತು ಜಾತ್ರೆಗಳ ವಿಶೇಷತೆ.<br>• ಉದಾಹರಣೆ- ಸಾಮೂಹಿಕ ಭೋಜನದ ವಿಶೇಷತೆ.<br>ಜಾತ್ರೆಗಳು, ವ್ಯಾಪಾರ-ವ್ಯವಹಾರದ ಪರಿಚಯ. | 4.1)ಹರಟೆ<br><br>4.2)ಆಹಾರ ಮೇಳ<br><br>4.3) ಸಾಮೂಹಿಕ ಭೋಜನ | 4.1)ಮಕ್ಕಳು ಹರಟೆಯ ಮೂಲಕ ತಾವು ನೋಡಿರುವ ಜಾತ್ರೆ ಅಲ್ಲಿನ ಆಟಗಳು,ಮನೋರಂಜನೆ,ವ್ಯಾಪಾರ ವ್ಯವಹಾರದ ಬಗ್ಗೆ ವಿಷಯ ವಿನಿಮಯ ಮಾಡಿಕೊಳ್ಳಲು ಅನುಕೂಲ ಕಲ್ಪಿಸಿ.<br>4.2) ಸಮುದಾಯದ ಸಹಭಾಗಿತ್ವದಿಂದ ಮಕ್ಕಳ ಕುಟುಂಬಗಳಲ್ಲಿ ವಿಶೇಷ ದಿನಗಳಲ್ಲಿ ತಯಾರಿಸುವ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸುವ ಕಾರ್ಯಕ್ರಮ ಹಮ್ಮಿಕೊಳ್ಳಿ.<br>4.3)ತರಗತಿಯ ಮಕ್ಕಳನ್ನು ಗುಂಪು ಮಾಡಿ,ಒಂದು ಗುಂಪಿನ ಎಲ್ಲಾ ವಿದ್ಯಾರ್ಥಿಗಳು ಮನೆಯಿಂದ 4 ಜನಕ್ಕೆ ಆಗುವಷ್ಟು ಒಂದೇ ರೀತಿಯ ಆಹಾರ ಪದಾರ್ಥವನ್ನು ತೆಗೆದುಕೊಂಡು ಬರುವಂತೆ |

| | | | | |
|---|---|---|---|---|
| | ಆಹಾರ ಪದ್ಧತಿಗಳನ್ನು ಮೆಚ್ಚುವರು. | • ನಮ್ಮ ರಾಜ್ಯದ ವಿಭಿನ್ನ ಸಂಸ್ಕೃತಿಯ ಪರಿಚಯ.<br>• ಆಹಾರ ಪದ್ಧತಿಯಲ್ಲಿನ ವಿಭಿನ್ನತೆ, ಕಾರಣಗಳು. | 4.4)ಚಿತ್ರಪಟ /ವಿಡಿಯೋ ಕ್ಲಿಪ್ ಪ್ರದರ್ಶನ | ತಿಳಿಸುವುದು.( ಉದಾ: ಒಂದು ಗುಂಪು ಆಲು ಪಲ್ಯ, ಒಂದು ಗುಂಪು ಪೂರಿ/ಚಪಾತಿ,ಒಂದು ಗುಂಪು ಸಾಂಬಾರು,ಒಂದು ಗುಂಪು ರೈಸ್) ತರಗತಿ ವಿದ್ಯಾರ್ಥಿಗಳಿಗೆ ಸಾಮೂಹಿಕ ಭೋಜನ ಆಯೋಜಿಸಿ.<br>(SOP ನಿಯಮ ಅನುಸರಿಸಿ ಸಾಮೂಹಿಕ ಭೋಜನ ಆಯೋಜಿಸಿ ).<br>➢ ಮಧ್ಯಾಹ್ನ ಬಿಸಿಯೂಟದ ಸಮಯದಲ್ಲಿಯೂ ಸಾಮೂಹಿಕ ಭೋಜನದ ಮಹತ್ವ ತಿಳಿಸಿ.<br>4.4) ಚಿತ್ರಪಟ/ ವಿಡಿಯೋ ಕ್ಲಿಪ್ ಗಳ ಮೂಲಕ ವಿವಿಧ ಪ್ರದೇಶಗಳ ಸಾಂಸ್ಕೃತಿಕ ಆಚರಣೆ/ಆಹಾರ ಪದ್ಧತಿಗಳು ಪ್ರಾದೇಶಿಕವಾಗಿ ಭಿನ್ನವಾಗಿವೆ ಎಂಬುದನ್ನು ಅರ್ಥೈಸಿ.<br>(ಉದಾ:ಉತ್ತರ ಕರ್ನಾಟಕ, ಮಲೆನಾಡು, ಕರಾವಳಿಯ ಆಹಾರ ಪದ್ಧತಿ ಮತ್ತು ಅಲ್ಲಿಯ ಆಚರಣೆಗಳು)<br>➢ ನಮ್ಮ ರಾಜ್ಯದ ಸಾಂಸ್ಕೃತಿಕ ಆಚರಣೆ,ಹಬ್ಬ ಇವುಗಳೊಂದಿಗೆ ಇತರೆ ರಾಜ್ಯಗಳ ಹಬ್ಬ, ಆಚರಣೆಗಳನ್ನು ಪರಿಚಯಿಸಿ.<br>**ಒಟ್ಟು ಅವಧಿಗಳು - 02** |
| 05 | 2 (5ನೇ ತರಗತಿ )<br>ಹವಾಮಾನ ಮತ್ತು ಭೂಪ್ರದೇಶ ಮತ್ತು | • ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲ | | |

| | | | | |
|---|---|---|---|---|
| | ಸಂಪನ್ಮೂಲಗಳ ನಡುವಿನ ಸಂಬಂಧವನ್ನು ಗ್ರಹಿಸುವರು.(ಆಹಾರ, ನೀರು, ಆವಾಸ, ಮತ್ತು ಜೀವನೋಪಾಯ).<br><br>ಹವಾಮಾನದಲ್ಲಿನವಿದ್ಯಮಾನಗಳನ್ನುತಿಳಿಯುವುದುಮತ್ತುಒಂದುದಿನದಲ್ಲಿನಡೆಯುವಬದಲಾವಣೆಗಳನ್ನುವಿವರಿಸುವುದು.<br>ಉದಾಹರಣೆ-ಮೋಡ ಮಳೆ ಬಿಸಿಲು ಗಾಳಿ ಇತ್ಯಾದಿ. | ಜೀವನದಲ್ಲಿ ಉಂಟುಮಾಡುವ ಬದಲಾವಣೆಗಳು.<br>• ಉಡುಗೆ-ತೊಡುಗೆ, ಬೆಳೆಗಳು ಹಾಗೂ ಆಹಾರ ಸೇವನೆಯ ಮೇಲೆ ಪ್ರಭಾವ.<br><br>• ನಿತ್ಯ ಜೀವನದಲ್ಲಿ ನಾವು ಗುರುತಿಸಬೇಕಾದ ಹವಾಮಾನದಘಟಕಾಂಶಗಳಾದಮಳೆ, ಮೋಡ, ಬಿಸಿಲು, ಗಾಳಿ ಇತ್ಯಾದಿ. | 5.1) ಆಟ (ಡಮ್ ಶರಾಡ್ಸ್)<br><br>5.2)ಆಟ-ಚಿತ್ರ ನೋಡು-ಉತ್ತರ ಹೇಳು | 5.1) ಸೂಚನೆಗಳು:<br>1-ಫ್ಲ್ಯಾಶ್ ಕಾಡ್ ಗಳ(FLASH CARDS) ಮೇಲೆ ಮಳೆಗಾಲ,ಚಳಿಗಾಲ,ಬೇಸಿಗೆ ಕಾಲ ಎಂದು ಬರೆಯಿರಿ.<br>2-ವಿಧ್ಯಾರ್ಥಿಗಳನ್ನು ಒಬ್ಬೊಬ್ಬರಂತೆ ಕರೆದು ಒಂದು ಕಾರ್ಡ್ ತೋರಿಸಿ.(ಇತರರಿಗೆ ಕಾಣಿಸದಂತೆ)<br>3-ತಮಗೆ ತೋರಿಸಲಾದ ಕಾರ್ಡಿನಲ್ಲಿನ ವಿಷಯದ ಕುರಿತು ಮಕ್ಕಳು ಮೂಕಾಭಿನಯ ಮಾಡಿ ತೋರಿಸುವಂತೆ ಸೂಚಿಸಿ.<br>4-ಇತರ ಮಕ್ಕಳು ಸರಿ ಉತ್ತರವನ್ನು ಊಹಿಸಿ ಹೇಳಲು ತಿಳಿಸಿ.<br>ಉದಾ:'ಮಳೆಗಾಲ' ಎಂಬ ಕಾರ್ಡ್ ಸಿಕ್ಕಿರುವ ವಿಧ್ಯಾರ್ಥಿ ಛತ್ರಿ ಹಿಡಿದು ನಡೆದುಕೊಂಡು ಹೋಗುವಂತೆ ಅಭಿನಯಿಸುವುದು.<br>5.2)ವಿವಿಧ ಋತುಮಾನಗಳಲ್ಲಿನ ಪರಿಸರ,ಜೀವನ ಕ್ರಮ, ಆಹಾರ,ಉಡುಪುಗಳ ಚಿತ್ರಗಳನ್ನುತೋರಿಸಿ, ಅವು ಯಾವ ಕಾಲಕ್ಕೆ ಸೇರಿವೆ ಎಂದು ಉತ್ತರ ಹೇಳಲು ಸೂಚಿಸಿ.<br>(ಉದಾ: ಸ್ವೆಟರ್ – ಟೋಪಿ ಚಿತ್ರ ನೋಡಿ ಮಕ್ಕಳು ಇದು ಚಳಿಗಾಲಕ್ಕೆ ಸಂಬಂಧಿಸಿದ್ದು ಎಂದು ಉತ್ತರಿಸುವುದು) |

| | | | | |
|---|---|---|---|---|
| | | | 5.3)ಕೊಲಾಜ್ ತಯಾರಿಸುವುದು. | <br><br>5.3)ವಿವಿಧ ಋತುಮಾನಗಳಲ್ಲಿ ಬಳಸುವ ಉಡುಪು,ಸೇವಿಸುವ ಆಹಾರ ಇವುಗಳನ್ನು ತೋರಿಸುವ ಕೊಲಾಜ್ ತಯಾರಿಸಲು ಮಾರ್ಗದರ್ಶನ ನೀಡಿ. |
| | | | 5.4)ವಿಡಿಯೋ ಕ್ಲಿಪಿಂಗ್/ಚಿತ್ರ ಪ್ರದರ್ಶನ | 5.4)ವಿವಿಧ ಋತುಮಾನಗಳು, ಭೂಪ್ರದೇಶಗಳು ಅಲ್ಲಿನ ಹವಾಮಾನದ ಪರಿಸ್ಥಿತಿಗಳನ್ನು ತೋರಿಸುವ ಚಿತ್ರ ಪಟ/ವಿಡಿಯೋ ಕ್ಲಿಪಿಂಗ್ ಪ್ರದರ್ಶಿಸಿ. |
| | | | 5.5) ಪ್ರದರ್ಶನ | 5.5) ಕರ್ನಾಟಕದಲ್ಲಿನ ವಿವಿಧ ಭೂಭಾಗ / ಜಿಲ್ಲೆಗಳಲ್ಲಿ ಬಳಸುವ ಆಹಾರ ಧಾನ್ಯಗಳು / ಆಹಾರ ಪದ್ಧತಿಯನ್ನು ಪಟ್ಟಿ ಮಾಡಿಸಿ. ಉದಾ : ಉತ್ತರ ಕರ್ನಾಟಕದಲ್ಲಿ ಜೋಳ, ಮಲೆನಾಡು ಅಕ್ಕಿಯ ಬಳಕೆ,ಕರಾವಳಿಯಲ್ಲಿ ಕುಚ್ಚಿಲ ಅಕ್ಕಿ . ಹೀಗೆ ಆಹಾರ ವೈವಿಧ್ಯತೆಯನ್ನು ಪರಿಚಯಿಸಿ. |
| | | | 5.6)ಹವಾಮಾನ ನಕ್ಷೆ ಬಳಕೆ | 5.6)ಹವಾಮಾನ ನಕ್ಷೆ ಬಳಸಿಕೊಂಡು ಮೋಡ,ಮಳೆ,ಬಿಸಿಲು,ಗಾಳಿಮುಂತಾದವುಗಳನ್ನು ಗುರುತಿಸಿ ತಿಳಿಯಲು ಅನುಕೂಲಿಸಿ.<br>ಒಟ್ಟು ಅವಧಿಗಳು - 03 |
| 06 | 7 (5ನೇ ತರಗತಿ ) | • ನೈಸರ್ಗಿಕ ಸಂಪನ್ಮೂಲಗಳ | | |

| | | | | |
|---|---|---|---|---|
| | ವಿವಿಧ ರೀತಿಯ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಅವುಗಳ ಸಂರಕ್ಷಣೆಯ ವಿಧಾನಗಳನ್ನು ವಿವರಿಸುವರು. | ಅವಶ್ಯಕತೆ.<br>• ನೈಸರ್ಗಿಕ ಸಂಪನ್ಮೂಲಗಳ ವಿಧಗಳು.<br>• ನೈಸರ್ಗಿಕ ಸಂಪನ್ಮೂಲಗಳ ಮಹತ್ವ.<br>• ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳು | 6.1) ಒಗಟು ಬಿಡಿಸುವುದು<br><br>6.2)ಚಿತ್ರಪಟ ಪ್ರದರ್ಶನ<br><br>6.3) ಟ್ರೆಜರ್ ಹಂಟ್ | 6.1)ಚೀಟಿಗಳಲ್ಲಿ ಸಂಪನ್ಮೂಲಗಳಿಗೆ ಸಂಬಂಧಿತ ಒಗಟು ಬರೆದು ವಿದ್ಯಾರ್ಥಿಗಳಿಗೆ ಕೊಟ್ಟು ಉತ್ತರ ಹೇಳಿಸಿ. (5ನೇ ತರಗತಿ ಪ.ಅ ಪುಟ ಸಂ 60)<br><br>6.2)ನೈಸರ್ಗಿಕ ಸಂಪನ್ಮೂಲಗಳ ಚಿತ್ರಪಟ ತೋರಿಸಿ ಪರಿಚಯಿಸಿ.<br><br>6.3)ವಿವಿಧ ಸಂಪನ್ಮೂಲಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಅಡಗಿಸಿಡಿ.ಮಕ್ಕಳಿಗೆ ಅದನ್ನು ಹುಡುಕಿ ತರುವ ಟಾಸ್ಕ್ ನೀಡಿ.(ಸುಳಿವುಗಳನ್ನು ನೀಡಿ) |
| | ಸಂಪನ್ಮೂಲಗಳನ್ನು( ನೀರು, ಆಹಾರ, ಇಂಧನ, ಅರಣ್ಯ )ಉಳಿಸಲು ಸೂಕ್ತ ಮಾರ್ಗಗಳನ್ನು ಸೂಚಿಸುವರು ಹಾಗೂ ನೈರ್ಮಲ್ಯವನ್ನು ಅನುಸರಿಸಿ ತ್ಯಾಜ್ಯಗಳ ನಿರ್ವಹಣೆ ಮಾಡುವರು. | • ಸಂಪನ್ಮೂಲಗಳ ಮಿತ ಬಳಕೆ ಮತ್ತು ಸಂರಕ್ಷಣೆಯ ಅಗತ್ಯತೆ. | 6.4) ಕೋಷ್ಟಕ ತಯಾರಿ<br><br>6.5)ಚಿತ್ರಕಲೆ<br><br>6.6) ಪಾತ್ರ ಪರಿಚಯ | 6.4) ಮಕ್ಕಳು ತಂದ ಚೀಟಿಗಳನ್ನು ಗೋಡೆಯ ಮೇಲೆ ತಯಾರಿಸಿದ ಕೋಷ್ಟಕದಲ್ಲಿ ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳಾಗಿ ವಿಂಗಡಿಸಿ ಅಂಟಿಸಲು ಸೂಚಿಸಿ. ( ಶಿಕ್ಷಕರ ಮಾರ್ಗದರ್ಶನ)<br>6.5)’ಅರಣ್ಯ ಉಳಿಸಿ’,ಜಲ ಸಂರಕ್ಷಣೆ’ ಮುಂತಾದ ಸಂದೇಶ ನೀಡುವ ಚಿತ್ರ ಬರೆದುಕೊಂಡು ಬರಲು ಸೂಚಿಸಿ /ಸ್ಪರ್ಧೆ ಏರ್ಪಡಿಸಿ.<br><br>6.6) ಸಾಲು ಮರದ ತಿಮ್ಮಕ್ಕ ಮೊದಲಾದ ಪರಿಸರ ಪ್ರೇಮಿಗಳ ಪರಿಚಯ ಮಾಡಿಕೊಡಿ.<br>6.7) ಹಿಂದೆ ಸಂಪನ್ಮೂಲ ಎಂದು |

| | | | | |
|---|---|---|---|---|
| | | | 6.7)ಕಲ್ಪನಾ ಲೋಕ-ಚರ್ಚೆ | ಪರಿಗಣಿಸದವು ಇಂದು ಅಮೂಲ್ಯ ಸಂಪನ್ಮೂಲವಾಗಿವೆ (ಉದಾ: ನೈಸರ್ಗಿಕ ಅನಿಲ)ಇದಕ್ಕೆ ಕಾರಣವನ್ನು ಚರ್ಚಿಸಿ. (5ನೇ ತರಗತಿ ಪರಿಸರ ಪುಟ ಸಂಖ್ಯೆ:75 – ನಿನಗಿದು ಗೊತ್ತೇ?) **ಪ್ರಶ್ನೆ:** “ಒಂದು ವೇಳೆ ಸಂಪನ್ಮೂಲಗಳೇ ಕಣ್ಮರೆ ಆದರೆ ಮಾನವನ ಜೀವನ ಹೇಗೆ? “ ಈ ಕುರಿತು ಚರ್ಚಿಸಿ **ಪರಿಸರ ಸಮತೋಲನದ** ಅವಶ್ಯಕತೆಯನ್ನು ಅರ್ಥೈಸಿ. |
| | | | 6.8) ಯೋಜನೆ | 6.8)ಕಾಡುಗಳಿಂದ ನಮಗಾಗುವ ಉಪಯೋಗ ಮತ್ತು ಅರಣ್ಯ ಸಂರಕ್ಷಣೆಯ ಅವಶ್ಯಕತೆ ಕುರಿತು ಯೋಜನಾ ಕಾರ್ಯ ನೀಡಿ. |
| | | | 6.9) ಆಟ : “ಇದು ನಿನ್ನ ಸರದಿ” | 6.9)ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ,ಒಬ್ಬೊಬ್ಬರು ಒಂದೊಂದು ಸಂಪನ್ಮೂಲದ ಹೆಸರನ್ನುಆಯ್ಕೆ ಮಾಡಿಕೊಂಡು - ಅದರ ಒಂದು ಉಪಯೋಗ ಹೇಳುವಂತೆ ಸೂಚನೆ ಕೊಡಿ. |
| | | | 6.10) ನಾಟಕ / ಕಿರುಚಿತ್ರ ಪ್ರದರ್ಶನ | 6.10) ಸ್ವಚ್ಛ ಭಾರತ / ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಕುರಿತಾದ ನಾಟಕ ಮಾಡಿಸಿ/ ಕಿರುಚಿತ್ರ ಪ್ರದರ್ಶಿಸಿ. |
| | | | 6.11) ನನ್ನ ಶಾಲೆ-ನನ್ನ ಕೊಡುಗೆ | 6.11) ಹಸಿ ಕಸ, ಒಣ ಕಸ, ವಿಷಕಾರಿ ಕಸ, ಮಲಿನ ಕಸ ಎಂದು ಶಾಲಾ ಆವರಣದಲ್ಲಿ ಮಕ್ಕಳಿಂದ ತ್ಯಾಜ್ಯವಿಂಗಡಿಸಿ, ಅವುಗಳನ್ನು ವಿಲೇವಾರಿ ಮಾಡಲು ಲಭ್ಯ |

| | | | | |
|---|---|---|---|---|
| | | | | ಸಂಪನ್ಮೂಲಗಳನ್ನು ಬಳಸಿಕೊಂಡು ಕಸದ ಬುಟ್ಟಿಗಳನ್ನು ತಂದು /ಶಾಲೆಯ ಸೂಕ್ತ ಸ್ಥಳದಲ್ಲಿ ಇರಿಸುವ ವ್ಯವಸ್ಥೆ ಮಾಡಿ.<br><br><br><br><br>ಒಟ್ಟು ಅವಧಿಗಳು - 04 |
| 07 | (ಮೂಲಭೂತ ಕಲಿಕಾಫಲ) ರಾಷ್ಟ್ರೀಯ ಚಿಹ್ನೆಗಳ /ರಾಷ್ಟ್ರ ಗೀತೆಯ ಮಹತ್ವವನ್ನು ಅರಿಯುವರು.<br>ರಾಷ್ಟ್ರೀಯ ಬಾವುಟ, ಲಾಂಛನ,ರಾಷ್ಟ್ರೀಯ ಹಬ್ಬಗಳನ್ನು ಗುರುತಿಸುತ್ತಾರೆ.<br><br>ವೈವಿಧ್ಯತೆಯಲ್ಲಿಏಕತೆ ಮತ್ತುಭಾವೈಕ್ಯತೆಯಅ | • ಭಾರತದ ರಾಷ್ಟ್ರ ಲಾಂಛನ, ರಾಷ್ಟ್ರಗೀತೆ, ತ್ರಿವರ್ಣ ಧ್ವಜ, ರಾಷ್ಟ್ರೀಯಸಂಕೇತಗಳು, ರಾಷ್ಟ್ರಪ್ರಾಣಿ,ಪಕ್ಷಿ ಇತ್ಯಾದಿ ಪರಿಚಯ.<br><br>• ರಾಷ್ಟ್ರೀಯ ಹಬ್ಬಗಳ ಆಚರಣೆಯ ವಿಶೇಷತೆ. | 7.1)ಚಿತ್ರಕಲಾ ಸ್ಪರ್ಧೆ /ರಂಗೋಲಿ ಸ್ಪರ್ಧೆ<br><br>➢ ವಿಡಿಯೋ ತರಗತಿ ಲಿಂಕ್ | 7.1)ರಾಷ್ಟ್ರೀಯ ಚಿಹ್ನೆ/ಸಂಕೇತಗಳ ಚಿತ್ರಕಲೆ, ರಂಗೋಲಿ ಬರೆಯುವ ಸ್ಪರ್ಧೆ ಏರ್ಪಡಿಸಿ.<br> <br><br>https://youtu.be/R8OzRSkCu0k<br>https://youtu.be/nBI_ouggvDY |

| | | | | |
|---|---|---|---|---|
| | ರ್ಥಗ್ರಹಿಸುವರು. | • ನಮ್ಮ ಭಾರತದ ಪ್ರಾದೇಶಿಕ ಸಾಂಸ್ಕೃತಿಕ ವೈವಿಧ್ಯತೆಗಳ ಪರಿಚಯ.<br>ವಿವಿಧತೆಯಲ್ಲಿ ಏಕತೆ ಶಾಂತಿ ಸಹಬಾಳ್ವೆಯ ಅಗತ್ಯತೆ. | 7.2)ಆಶುಭಾಷಣ<br>7.3)ಆಡಿಯೋ ಕ್ಲಿಪಿಂಗ್ ಬಳಕೆ<br>7.4)ಆಟ : "ಮೌಲ್ಯ ಬಂಡಿ"<br>7.5) ನೃತ್ಯ<br>7.6) ವಿಡಿಯೋ ಪ್ರದರ್ಶನ<br>7.7) ಆಡಿಯೋ ಕ್ಲಿಪ್<br>7.8)ಕಿರುನಾಟಕ/ ಸ್ಕಿಟ್ | 7.2)ರಾಷ್ಟ್ರೀಯ ಹಬ್ಬಗಳು/ದಿನಾಚರಣೆಗಳ ಕುರಿತು ಆಶುಭಾಷಣಸ್ಪರ್ಧೆಯನ್ನುಏರ್ಪಡಿಸಿ.<br>7.3)ಸಂಪೂರ್ಣ "ಜನಗಣಮನ" ಗೀತೆಯನ್ನು ಆಡಿಯೋ ಮೂಲಕ ಮಕ್ಕಳಿಗೆ ಕೇಳಿಸಿ.<br>7.4)ಸಾಧ್ಯವಾದಲ್ಲಿ 24 ಮಕ್ಕಳನ್ನು ಬಳಸಿಕೊಂಡು ಅಶೋಕ ಚಕ್ರದ ಪ್ರತಿಯೊಂದು ಗೆರೆಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ನಾಮಫಲಕ ಬರೆದು,ಮಕ್ಕಳೇ ಚಕ್ರದಂತೆ ತಿರುಗುತ್ತಾ ಒಬ್ಬೊಬ್ಬರಾಗಿ ಪರಿಚಯಿಸಲು ಸೂಚಿಸಿ.<br>(7.5 &7.6)ಭಾರತದ ಸಾಂಸ್ಕೃತಿಕ ವೈವಿಧ್ಯತೆ ಬಿಂಬಿಸುವ ನೃತ್ಯ ಮಾಡಿಸಿ/ವಿಡಿಯೋ ತೋರಿಸಿ.<br>7.7) https://youtu.be/4rs7dG-0WcE<br>7.8)'ವಿವಿಧತೆಯಲ್ಲಿ ಏಕತೆ'ಯ ಮಹತ್ವ ಸಾರುವ ಕಿರು ನಾಟಕವನ್ನುಮಾಡಿಸಿ.<br>ಒಟ್ಟು ಅವಧಿಗಳು - 03 |
| 08 | (ಮೂಲಭೂತ ಕಲಿಕಾಫಲ)<br>ಭಾರತದ ಪ್ರಾಕೃತಿಕ | • ಭಾರತದ ಪ್ರಾಕೃತಿಕ ವಿಭಾಗಗಳಾದ ಹಿಮಾಲಯ ಪರ್ವತ, | 8.1)ಮಾದರಿ ತಯಾರಿ | 8.1)ಟೋಪೋಗ್ರಫಿ ತಯಾರಿಸಲು ಅನುಕೂಲಿಸುವ ಮೂಲಕ ಭಾರತದ ಪ್ರಾಕೃತಿಕ ವಿಭಾಗಗಳ ಪರಿಚಯ ಮಾಡಿಸಿ. |

| | | | | |
|---|---|---|---|---|
| | ವಿಭಾಗಗಳ ಪರಿಚಯ ಹೊಂದುವರು.<br><br>ಜನಜೀವನದ ಮೇಲೆ ಪ್ರಾಕೃತಿಕ ಪರಿಸರದ ಅಂಶಗಳು ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಗ್ರಹಿಸುವರು. | ನದಿ ಬಯಲು, ಪ್ರಸ್ಥಭೂಮಿ, ಕರಾವಳಿ, ಮರುಭೂಮಿ.<br>● ಭಾರತ ಪರ್ಯಾಯ ದ್ವೀಪ.<br>● ಭಾರತದ ಪ್ರಾಕೃತಿಕ ವೈವಿಧ್ಯತೆ ಮತ್ತು ಜನಜೀವನದ ಮೇಲೆ ಬೀರುವ ಪ್ರಭಾವ. | 8.2)ಜಿಯೋ ಮ್ಯಾಪ್/ ಗೂಗಲ್ ಅರ್ಥ್ ಬಳಕೆ<br><br>8.3)ಕಲಿಕಾ ನಿಲ್ದಾಣ<br><br>8.4)ರಸಪ್ರಶ್ನೆ | 8.2)"ಜಿಯೋ ಮ್ಯಾಪ್" /ಗೂಗಲ್ ಅರ್ಥ್ "ಬಳಕೆಯ ಮೂಲಕ ಭಾರತದ ದಟ್ಟ ಅರಣ್ಯ, ಗಿರ್ ಅರಣ್ಯ, ಅಸ್ಸಾಂ ಕಾಡು, ಹಿಮಾಲಯದ ಸಸ್ಯವರ್ಗ, ಪಶ್ಚಿಮ ಘಟ್ಟ ಮೊದಲಾದವನ್ನು ತೋರಿಸಿ ಭಾರತದ ಪ್ರಾಕೃತಿಕ ಸೌಂದರ್ಯವನ್ನು ಅನಾವರಣಗೊಳಿಸಿ.<br>8.3)ಭಾರತದ ಪ್ರಾಕೃತಿಕ ವಿಭಾಗಗಳು ಅಲ್ಲಿನ ಜನಜೀವನದ ಮೇಲೆ ಹೇಗೆ ಪ್ರಭಾವ ಬೀರಿವೆ ? ಮುಂತಾದ ಪ್ರಮುಖ ವಿಷಯಗಳನ್ನು ಒಳಗೊಂಡ ಮಾಹಿತಿಯನ್ನು 4 ಕಲಿಕಾ ನಿಲ್ದಾಣಗಳಲ್ಲಿಡಿ. (4 ಪ್ರಾಕೃತಿಕ ವಿಭಾಗಗಳ ಪರಿಚಯ ಮಾಡಿಸುವಂತಿರಲಿ ). ಮಕ್ಕಳು ಓದಿ ತಿಳಿದು /ಮಾಹಿತಿ ಕಲೆ ಹಾಕಿಕೊಂಡು ಬಂದು ವಿಷಯ ವಿನಿಮಯ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಿ.<br>8.4)ಭಾರತದ ಪ್ರಾಕೃತಿಕ ವಿಭಾಗಗಳಿಗೆ ಸಂಬಂಧಿಸಿದಂತೆ ಪ್ರಶ್ನಾವಳಿ ರಚಿಸಿ ರಸಪ್ರಶ್ನೆ ನಡೆಸಿ.<br>**ಒಟ್ಟು ಅವಧಿಗಳು – 04** |
| 09 | **(ಮೂಲಭೂತ ಕಲಿಕಾಫಲ)**<br>ಪ್ರಪಂಚದಲ್ಲಿ ಭಾರತದ ಭೌಗೋಳಿಕ ಸ್ಥಾನ,ನೆರೆಯದೇಶಗಳು, ಸುತ್ತುವರಿದ ಜಲರಾಶಿ, | ● ಭಾರತದ ಭೌಗೋಳಿಕ ಸ್ಥಾನ, ನೆರೆಯ ದೇಶಗಳು, ಭಾರತವನ್ನು ಆವರಿಸಿದ ಜಲರಾಶಿಗಳು. | 9.1)ನಕಾಶೆ ಓದುವುದು | 9.1)ಪ್ರಪಂಚದ ರಾಜಕೀಯ ಭೂಪಟವನ್ನು ನೀಡಿ, ಅದರಲ್ಲಿ ಭಾರತವನ್ನು ಗುರುತಿಸಿ, ಅದರ ಸ್ಥಾನವನ್ನು ತಿಳಿಯಲು ಸಹಕರಿಸಿ.<br>❖ ಭಾರತದ ರಾಜಕೀಯ ಭೂಪಟವನ್ನು |

| | | | | |
|---|---|---|---|---|
| | ಆಡಳಿತ ವಿಭಾಗಗಳು, ದ್ವೀಪ ಸಮೂಹಗಳ ಬಗ್ಗೆ ತಿಳಿಯುವರು.<br><br>ನಮ್ಮ ರಾಜ್ಯ ಅಥವಾ ಜಿಲ್ಲೆಯ ಸಂಕ್ಷಿಪ್ತ ಪರಿಚಯ ಹೊಂದುವರು. | • ಭಾರತದ ರಾಜ್ಯ-ಕೇಂದ್ರಾಡಳಿತ ಪ್ರದೇಶಗಳು.<br><br>ನಮ್ಮರಾಜ್ಯ ಕರ್ನಾಟಕ- ನೆರೆಯ ರಾಜ್ಯಗಳ ಪರಿಚಯ.<br>ನಮ್ಮಜಿಲ್ಲೆ ಮತ್ತು ನೆರೆಯಜಿಲ್ಲೆಗಳು. | **9.2) ಹೂವು-ನಕ್ಷೆ ಆಟ**<br><br>9.3)ಕಲಿಕಾ ನಿಲ್ದಾಣ | ನೀಡಿ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಸುತ್ತುವರಿದ ಜಲರಾಶಿಗಳ ಪರಿಚಯ ಮಾಡಿಸಿ.<br>❖ ಕರ್ನಾಟಕದ ಭೂಪಟದ ಸಹಾಯದೊಂದಿಗೆ ಜಿಲ್ಲೆಗಳು, ನಮ್ಮ ನೆರೆಯ ಜಿಲ್ಲೆಗಳ ಸಂಕ್ಷಿಪ್ತ ಪರಿಚಯ ಮಾಡಿಸಿ.<br>9.2) ಭಾರತದ ನಕ್ಷೆಯನ್ನು ಶಾಲಾ ಮೈದಾನದಲ್ಲಿ ಬಿಡಿಸಿ,ರಾಜ್ಯಗಳನ್ನು ಗುರುತಿಸಿ. ಪ್ರತಿ ವಿದ್ಯಾರ್ಥಿಗೆ ಒಂದೊಂದು ರಾಜ್ಯದ ಹೆಸರನ್ನು ಹೇಳಿ. ವಿದ್ಯಾರ್ಥಿಯು ಒಂದು ಹೂವನ್ನು ತೆಗೆದುಕೊಂಡುಹೋಗಿ ಆಯಾಯ ರಾಜ್ಯದ ಮೇಲೆ ಇಡುವಂತೆ ಸೂಚನೆ ಕೊಡಿ.<br>9.3)ನಮ್ಮ ರಾಜ್ಯದ ಜಿಲ್ಲೆಗಳು,ನೆರೆಯ ರಾಜ್ಯಗಳು, ಮತ್ತಿತರ ಅಂಶಗಳನ್ನು ಪಟ್ಟಿ ಮಾಡಿ ಕಲಿಕಾ ನಿಲ್ದಾಣಗಳಲ್ಲಿರಿಸಿ ಮಾಹಿತಿ ತಿಳಿಯಲು ಅನುಕೂಲಿಸಿ.<br>**ಒಟ್ಟು ಅವಧಿಗಳು - 04** |
| 10 | **(ಮೂಲಭೂತ ಕಲಿಕಾಫಲ)**<br>ಸೌರವ್ಯೂಹದ ಪರಿಚಯ ಹೊಂದುವರು.<br><br>ಭೂಮಿ ಇತರೆಗ್ರಹಗಳಿಗಿಂತ | • ಸೂರ್ಯ ಮತ್ತು ಅದರ ಪರಿವಾರ. ಭೂಮಿಯ ಸ್ಥಾನ, ಗಾತ್ರ, ಆಕಾರ.<br><br>• ಭೂಮಿಯು ಇತರೆ ಗ್ರಹಗಳಿಂದ ವಿಭಿನ್ನ | 10.1)ಚಟುವಟಿಕೆ: **"ಬಾ ನೋಡೋಣ ಆಕಾಶ"** | 10.1)ಛತ್ರಿಯ ಒಳಭಾಗದಲ್ಲಿ ಸೂರ್ಯ,ನಕ್ಷತ್ರಗಳ ರೇಡಿಯಂ ಸ್ಟಿಕ್ಕರ್ ಅಂಟಿಸಿ ಛತ್ರಿನ್ನು ತಿರುಗಿಸುತ್ತಾ ಮಕ್ಕಳಿಗೆ ಕೆಳಗಿನಿಂದ ವೀಕ್ಷಿಸಲು ತಿಳಿಸಿ. ಆಕಾಶ ಕಾಯ, ಹಗಲು-ರಾತ್ರಿ ಇವುಗಳೆಲ್ಲಾ ಹೇಗೆ ಸಾಧ್ಯ ಎಂಬುದನ್ನು ಚರ್ಚಿಸಿ. |

| | | | | |
|---|---|---|---|---|
| | ಹೇಗೆ ವಿಶಿಷ್ಟವಾಗಿದೆ ಎಂಬುದನ್ನು ಅರಿಯುವರು. | -ಭೂಮಿಯ ವಿಶಿಷ್ಟತೆ. | 10.2) ಚಟುವಟಿಕೆ: "ನಾವು ಗ್ರಹಗಳಾದಾಗ"<br><br>10.3)ಚಟುವ ಟಿಕೆ: " ತಿಳಿಯೋಣ ನಮ್ಮ ಭೂಮಿಯ ಗಾತ್ರ-ಆಕಾರ" | 10.2)ಇಬ್ಬರು ಮಕ್ಕಳನ್ನು ಕರೆದು ಒಬ್ಬರನ್ನು ಮಧ್ಯದಲ್ಲಿ ಸೂರ್ಯನಂತೆ ಕೂರಿಸಿ, ಇನ್ನೊಬ್ಬನಿಗೆ ತನ್ನನ್ನು ತಾನು ಸುತ್ತುತ್ತಾ ಸೂರ್ಯನನ್ನು ಸುತ್ತಲು ಹೇಳಿ.ಹೀಗೆ ಗ್ರಹಗಳು ಸೂರ್ಯನನ್ನು ಸುತ್ತುತ್ತವೆ ಮತ್ತು ಹಗಲು ರಾತ್ರಿ ಹೇಗೆ ಆಗುತ್ತದೆ ಎಂಬುದನ್ನು ಅರ್ಥೈಸಿ( 5ನೇ ತರಗತಿ ಪರಿಸರ ಅಧ್ಯಯನ ಪಾಠ14 ಪುಟ ಸಂಖ್ಯೆ-185)<br><br>10.3)ಸೂಚನೆಗಳು : (ಭೂಮಿಯ ಆಕಾರ ತಿಳಿಯಲು)<br>1- ಗ್ಲೋಬ್ ನ ಮೇಲೆ ಕಾಗದದ ಚಿಕ್ಕ ದೋಣಿಗಳನ್ನು ಒಂದೇ ಸಾಲಿನಲ್ಲಿ ಅಂಟಿಸಿ. (ದೋಣಿಗಳಿಗೆ ಚಿಕ್ಕಧ್ವಜ ಅಂಟಿಸಿರಬೇಕು)<br>2-ಸಮತಟ್ಟಾದ ಕಾಗದದ ಮೇಲೆಯೂ ಚಿಕ್ಕ ದೋಣಿಗಳನ್ನು ಒಂದೇ ಸಾಲಿನಲ್ಲಿ ಅಂಟಿಸಿ.<br>3-ಎರಡನ್ನೂ ಒಂದು ಬದಿಯಿಂದ ಗಮನಿಸಲು ತಿಳಿಸಿ. ಗ್ಲೋಬನ್ನು ನಿಧಾನವಾಗಿ ತಿರುಗಿಸುತ್ತಾ ಗಮನಿಸುವಂತೆ ಸೂಚನೆ ಕೊಡಿ.<br>4-ಕಾಗದದ ಮೇಲಿನ ಎಲ್ಲಾ ದೋಣಿಗಳು ಒಂದೇ ಬಾರಿ ಕಾಣುವವು. ಗ್ಲೋಬಿನ ಮೇಲಿನ ದೋಣಿಗಳು ಗ್ಲೋಬನ್ನು ನಿಧಾನ ತಿರುಗಿಸುತ್ತಾ ನೋಡಿದಾಗ ಒಂದೊಂದಾಗಿ ಬರುತ್ತಿರುವುದನ್ನು ಗಮನಿಸಲು ಸೂಚಿಸಿ. |

| | | | | |
|---|---|---|---|---|
| | | | | ➢ ಭೂಮಿಯು 'ಜಿಯಾಡ್' ಆಕಾರದಲ್ಲಿ ಇರುವುದರಿಂದ ಎಲ್ಲಾ ದೋಣಿಗಳು ಒಮ್ಮೆಗೆ ಕಾಣಿಸದೇ ಒಂದರ ಹಿಂದೆ ಮತ್ತೊಂದರಂತೆ ಬರುವುದನ್ನು ಗಮನಿಸಲು ಸೂಚಿಸಿ.ಇದರ ಮೂಲಕ ಭೂಮಿಯು ಚಪ್ಪಟೆಯಾಗಿಲ್ಲ ಬದಲಾಗಿ ಜಿಯಾಡ್ ಆಕಾರದಲ್ಲಿದೆ ಎಂಬುದನ್ನು ಅರ್ಥೈಸಿ.<br>10.3) **ಚಟುವಟಿಕೆ:(ಭೂಮಿಯ ಗಾತ್ರ)**<br>ಸೂಚನೆಗಳು:<br>1-ವಿವಿಧ ಗಾತ್ರದ 4 ಚೆಂಡುಗಳನ್ನು ತೆಗೆದುಕೊಂಡು ಅದರ ಸುತ್ತಲು ದಪ್ಪ ಟೇಪ್ ಸುತ್ತಿರಿ.<br>2-ಟೇಪ್ ಸುತ್ತಿದ ಭಾಗದ ಸುತ್ತಳತೆಯನ್ನು ಹಿಡಿದು ಕಾಗದದ ಮೇಲೆ ಗೆರೆ ಬರೆಯಿರಿ.<br>3-ಎಲ್ಲಾ ಚೆಂಡುಗಳ ಸುತ್ತಳತೆ ಬರೆಯುತ್ತಾ ಹೋದಂತೆ ಗೆರೆಗಳು ನೇರವಾಗುವುದನ್ನು ಗಮನಿಸಲು ಸೂಚಿಸಿ. ಇದರಿಂದ ಭೂಮಿಯು ಬಹಳ ದೊಡ್ಡ ಗಾತ್ರದಲ್ಲಿರುವುದರಿಂದ ನಮಗೆ ಅದರ ನೈಜ ಆಕಾರ ಗೋಚರಿಸದೇ ಎಲ್ಲೆಡೆ ಸಮತಟ್ಟಾಗಿರುವಂತೆ ಕಾಣುವುದೆಂದು ಅರ್ಥೈಸಿ.<br>**ಒಟ್ಟು ಅವಧಿಗಳು -04** |